

2011ರಲ್ಲಿ ಏಕದಿನ ವಿಶ್ವಕಪ್ ಟ್ರೋಫಿಯೊಂದಿಗೆ ಮಹೇಂದ್ರ ಸಿಂಗ್ ಧೋನಿ

## ನಾಯಕನ ಸಾಧನೆಗಳು

ಭಾರತ ತಂಡ ಟೆಸ್ಟ್ ಮಾದರಿಯಲ್ಲಿ ಧೋನಿ ನಾಯಕತ್ವದಲ್ಲಿ 2008ರಿಂದ 2014ರ ತನಕ 60 ಪಂದ್ಯಗಳಲ್ಲಿ ಆಡಿದ್ದು, 27ರಲ್ಲಿ ಗೆಲುವು ಸಾಧಿಸಿದೆ. 15 ಪಂದ್ಯಗಳು ಡ್ರಾ ಆಗಿವೆ. ಏಕದಿನದಲ್ಲಿ 2007ರಿಂದ 2018ರ ಅವಧಿಯಲ್ಲಿ 200 ಪಂದ್ಯಗಳಿಂದ ಭಾರತ 110ರಲ್ಲಿ ಗೆಲುವು ಸಾಧಿಸಿದೆ. ಐದು ಪಂದ್ಯಗಳು ಟೈ ಆಗಿವೆ. ಅಂತರರಾಷ್ಟ್ರೀಯ ಟಿ–20 ಮಾದರಿಯಲ್ಲಿ ಆಡಿದ 72 ಪಂದ್ಯಗಳಲ್ಲಿ 41ರಲ್ಲಿ ಗೆಲುವು ಲಭಿಸಿದ್ದು, ಒಂದು ಟೈ ಆಗಿದೆ. ನಾಯಕರಾಗಿ ಧೋನಿ ಒಟ್ಟು 332 ಪಂದ್ಯಗಳನ್ನಾಡಿದ್ದಾರೆ. ನಾಯಕರಾಗಿ ಇಷ್ಟೊಂದು ಪಂದ್ಯಗಳಲ್ಲಿ ಆಡಿದ ಭಾರತದ ಏಕೈಕ ಆಟಗಾರ ಎನ್ನುವ ಹೆಗ್ಗಳಿಗೆ ಹೊಂದಿದ್ದಾರೆ.

ಟೆಸ್ಟ್‌ನಲ್ಲಿ 4,000ಕ್ಕಿಂತಲೂ ಹೆಚ್ಚು ರನ್ ಗಳಿಸಿದ ಭಾರತ ಮೊದಲ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್, ಏಕದಿನ ಕ್ರಿಕೆಟ್‌ನಲ್ಲಿ ಹೆಚ್ಚು ಬಾರಿ (82) ಔಟಾಗದೆ ಉಳಿದ ಬ್ಯಾಟ್ಸ್‌ಮನ್ ಎನ್ನುವ ದಾಖಲೆಗಳನ್ನು ಹೊಂದಿದ್ದಾರೆ. ಧೋನಿ ನಾಯಕತ್ವದಲ್ಲಿ ಭಾರತ 2007ರ ಟಿ–20 ಟೂರ್ನಿ, 2011ರಲ್ಲಿ ಏಕದಿನ ವಿಶ್ವಕಪ್ ಮತ್ತು 2013ರಲ್ಲಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಪ್ರಶಸ್ತಿಗಳನ್ನು ಜಯಿಸಿತ್ತು. ಮಹತ್ವದ ಈ ಮೂರು ಟ್ರೋಫಿಗಳನ್ನು ಭಾರತಕ್ಕೆ ತಂದುಕೊಟ್ಟ ಏಕೈಕ ನಾಯಕ ಎನ್ನುವ ಹೆಗ್ಗಳಿಕೆ ಧೋನಿ ಹೆಸರಿನಲ್ಲಿದೆ.

ಧೋನಿಗೂ ಮೊದಲೇ ಭಾರತ ತಂಡದಲ್ಲಿ ಆಡಿದ್ದ ವಿಕೆಟ್ ಕೀಪರ್‌ಗಳಾದ ಪಾರ್ಥಿವ್ ಪಟೇಲ್ ಮತ್ತು ದಿನೇಶ್ ಕಾರ್ತಿಕ್ ತಂಡಕ್ಕೆ ಮರಳಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಹೀಗಾಗಿ ವಿಕೆಟ್ ಕೀಪರ್ ಸ್ಥಾನ ಹಗ್ಗದ ಮೇಲಿನ ನಡಿಗೆಯಂತಿತ್ತು. ಸತತ ನಾಲ್ಕು ಪಂದ್ಯಗಳಲ್ಲಿ ವೈಫಲ್ಯ ಕಂಡಿದ್ದ ಧೋನಿ ತಂಡದಿಂದ ಸ್ಥಾನ ಕಳೆದುಕೊಳ್ಳುವ ಭೀತಿಯಲ್ಲಿದ್ದರು.

ವಿಶಾಖಪಟ್ಟಣದಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಎರಡನೇ ಏಕದಿನ ಪಂದ್ಯಕ್ಕೆ ಅಂತಿಮ ಹನ್ನೊಂದರ ತಂಡದಲ್ಲಿ ಸ್ಥಾನ ಸಿಗುವ ಬಗ್ಗೆ ಧೋನಿಗೇ ಭರವಸೆಯಿರಲಿಲ್ಲ. ಆಗಿನ ತಂಡದ ನಾಯಕ ಸೌರವ್ ಗಂಗೂಲಿ ಪಂದ್ಯದ ಹಿಂದಿನ ದಿನ ರಾತ್ರಿ ಕರೆ ಮಾಡಿ 'ನಾಳೆಯ ಪಂದ್ಯಕ್ಕೆ ತಯಾರಾಗಿ' ಎಂದ ಮೇಲೆಯೇ ಧೋನಿ ತಮ್ಮ ಹೊಸ ಬ್ಯಾಟ್ ಸಿದ್ಧಪಡಿಸಿಕೊಂಡಿದ್ದರು!

ಇದು ಬದುಕಿನ ಕೊನೆಯ ಅವಕಾಶವೆಂಬಂತೆ ಧೋನಿ ಆ ಪಂದ್ಯಕ್ಕೆ ಸಿದ್ಧರಾಗಿದ್ದರು. ಹಿಂದಿನ ನಾಲ್ಕೂ ಪಂದ್ಯಗಳಲ್ಲಿ ಏಳನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದ ರಾಂಚಿ ಹುಡುಗನಿಗೆ ದಿಢೀರನೆ ಬಡ್ತಿ ಲಭಿಸಿ ಮೂರನೇ ಕ್ರಮಾಂಕದಲ್ಲಿ ಆಡುವ ಅವಕಾಶ ಸಿಕ್ಕಿತು. ಬ್ಯಾಟಿಂಗ್ ಕ್ರಮಾಂಕ ಬದಲಾದ ಮೊದಲ ಪಂದ್ಯದಲ್ಲೇ ಧೋನಿ 148 ರನ್ ಗಳಿಸಿ ಟೀಕಾಕಾರರ ಬಾಯಿ ಮುಚ್ಚಿಸಿದ್ದರು. ಅವರ ಹೆಲಿಕಾಪ್ಟರ್ ಹೊಡೆತಗಳು ಕ್ರಿಕೆಟ್ ಪ್ರೇಮಿಗಳನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದವು. ಹೀಗೆ ಸಿಕ್ಕ ಮೊದಲ ಯಶಸ್ಸು ಧೋನಿ ಬದುಕಿನ ದಿಕ್ಕು ಬದಲಿಸಿತು. ಪದಾರ್ಪಣೆ ಮಾಡಿದ ಮೂರೇ ವರ್ಷಗಳಲ್ಲಿ ನಾಯಕನ ಜವಾಬ್ದಾರಿ ಲಭಿಸಿತು. ವಿಶೇಷವೆಂದರೆ ಬ್ಯಾಟಿಂಗ್ ಮಾಂತ್ರಿಕ ಸಚಿನ್ ತೆಂಡೂಲ್ಕರ್, 'ಭಾರತ ತಂಡಕ್ಕೆ ಧೋನಿ ಸಮರ್ಥ ನಾಯಕ' ಎಂದು ಖುದ್ದು ಶಿಫಾರಸು ಮಾಡಿದ್ದರು!

## ನಾಯಕರ ನಾಯಕ

ಭಾರತ ಕ್ರಿಕೆಟ್ ತಂಡದಲ್ಲಿ ನಾಯಕತ್ವ ಎನ್ನುವುದು ಹೆಚ್ಚಿನ ಜವಾಬ್ದಾರಿ, ಸದಾ ಒತ್ತಡ ಹಾಗೂ ನಿರೀಕ್ಷೆಗಳ ಮೂಟೆ ಹೊತ್ತುಕೊಂಡು ಶ್ರೇಷ್ಠ ಪ್ರದರ್ಶನ ನೀಡಬೇಕಾದ ಅನಿವಾರ್ಯತೆಯ ಸ್ಥಾನ. ಆದ್ದರಿಂದ ಭಾರತದಲ್ಲಿ ಬಹಳಷ್ಟು ಜನ ನಾಯಕರಾಗಿ ಅನೇಕ ದಾಖಲೆಗಳನ್ನು ಮಾಡಿದ್ದಾರೆ. ಆದರೆ ಸಮಚಿತ್ತದಿಂದ ಒತ್ತಡ ನಿಭಾಯಿಸುವಲ್ಲಿ ಧೋನಿ ಅವರಷ್ಟು ಯಶಸ್ಸು ಉಳಿದವರು ಕಂಡಿಲ್ಲ.

1983ರಲ್ಲಿ ಭಾರತಕ್ಕೆ ಚೊಚ್ಚಲ ವಿಶ್ವಕಪ್ ಗೆದ್ದು ಕೊಟ್ಟ ನಾಯಕ ಕಪಿಲ್ ದೇವ್, ಮೊಹಮ್ಮದ್ ಅಜರುದ್ದೀನ್, ಸೌರವ್ ಗಂಗೂಲಿ ಇವರೆಲ್ಲ ನಾಯಕತ್ವದ ಹುದ್ದೆಗೆ ಘನತೆ ತಂದುಕೊಟ್ಟವರು. ಧೋನಿ ತಮ್ಮ ಸ್ಥಾನಕ್ಕೆ ಘನತೆ ತಂದುಕೊಡುವ ಜೊತೆಗೆ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿ ಆ ಸ್ಥಾನದ ಗೌರವ ಹೆಚ್ಚಿಸಿದ್ದಾರೆ.

ಭಾರತ ತಂಡದ ಬಹಳಷ್ಟು ಆಟಗಾರರು ಟೆಸ್ಟ್, ಏಕದಿನ ಮತ್ತು ಟಿ–20 ಮಾದರಿಗಳಲ್ಲಿ ನಾಯಕರಾಗಿ ವೈಯಕ್ತಿಕ ಪ್ರದರ್ಶನದಲ್ಲಿ ವೈಫಲ್ಯ ಕಂಡು ಬಹಳಷ್ಟು ಒತ್ತಡದಲ್ಲಿ ನಾಯಕತ್ವದ ದಿನಗಳನ್ನು ದೂಡಿದ ಉದಾಹರಣೆಗಳೂ ಇವೆ. ಭಾರತ ತಂಡಕ್ಕೆ ಸ್ಥಿರವಾಗಿ ಆಡಬಲ್ಲ, ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಬಲ್ಲ ನಾಯಕನ ಅಗತ್ಯವಿತ್ತು. ಮೊಹಮ್ಮದ್ ಅಜರುದ್ದೀನ್, ಸೌರವ್ ಗಂಗೂಲಿ ರೀತಿಯಲ್ಲಿ ತಂಡವನ್ನು ನಿಭಾಯಿಸುವವರು ಬೇಕಿತ್ತು. 2007ರಲ್ಲಿ 'ಐಸಿಸಿ ವಿಶ್ವ ಟಿ–20' ಟೂರ್ನಿಗೆ ನಾಯಕತ್ವ ಹೊತ್ತ ಧೋನಿ ಸಮಚಿತ್ತದಿಂದ ಹಂತಹಂತವಾಗಿ ಎಲ್ಲವನ್ನೂ ನಿಭಾಯಿಸಿ 'ನಾಯಕರ ನಾಯಕ' ಎನಿಸಿಕೊಂಡರು. ನಾಯಕತ್ವ ವಹಿಸಿಕೊಂಡ ಮೊದಲ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿತ್ತು. ಅದೇ ವರ್ಷ ಏಕದಿನ ಮಾದರಿಗೆ ರಾಹುಲ್ ದ್ರಾವಿಡ್ ಅವರಿಂದ, ಮರು ವರ್ಷ ಅನಿಲ್ ಕುಂಬ್ಳೆ ಅವರಿಂದ ಟೆಸ್ಟ್ ತಂಡದ ನಾಯಕತ್ವ ಪಡೆದುಕೊಂಡ ಧೋನಿ ಪೂರ್ಣಾವಧಿ ನಾಯಕರೆನಿಸಿದರು. ವಿಶ್ವಕಪ್ ಟೂರ್ನಿಯಲ್ಲಿ 2011 ಹಾಗೂ 2015ರಲ್ಲಿ ತಂಡವನ್ನು ಮುನ್ನಡೆಸಿದ್ದರು.

ಧೋನಿ ನಾಯಕತ್ವದಲ್ಲಿ ಭಾರತ ತಂಡ ಮೊಟ್ಟ ಮೊದಲ ಬಾರಿಗೆ 2009ರಲ್ಲಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದಿತ್ತು. ಟೆಸ್ಟ್‌ನಲ್ಲಿ ಭಾರತ ಹೆಚ್ಚು ಪಂದ್ಯಗಳನ್ನು (27) ಜಯಿಸಿದ್ದು 'ಮಹಿ' ಸಾರಥ್ಯದಲ್ಲಿ. ಈ ಸಾಧನೆ ಮೊದಲು ಸೌರವ್ ಗಂಗೂಲಿ (21 ಪಂದ್ಯಗಳು) ಹೆಸರಿನಲ್ಲಿತ್ತು. ಹೀಗೆ ಹಲವು ಮೊದಲುಗಳ ಒಡೆಯರಾದ 'ಕ್ಯಾಪ್ಟನ್ ಕೂಲ್' ಧೋನಿ ಅವರು ರಿಕಿ ಪಾಂಟಿಂಗ್, ಗ್ರೇಮ್ ಸ್ಮಿತ್, ಅಲನ್ ಬಾರ್ಡರ್, ಸ್ಟೀಫನ್ ಫ್ಲೆಮಿಂಗ್, ಸ್ಟೀವ್ ವಾ, ಮೊಹಮ್ಮದ್ ಅಜರುದ್ದೀನ್, ಮಾಹೇಲ ಜಯವರ್ಧನೆ ಅವರಂಥ ವಿಶ್ವಶ್ರೇಷ್ಠ ನಾಯಕರ ಪಟ್ಟಿಯಲ್ಲಿ ಯಾವಾಗಲೂ ಅಗ್ರಸ್ಥಾನದಲ್ಲಿರುತ್ತಾರೆ.